ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಮುಂದೆ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುವಾಗ ಆ ಕೆಲಸವನ್ನು ಅವರಿಗೆ ಬಿಡದೆ ತಾವು ಆ ಜವಾಬ್ದಾರಿಯನ್ನು ತೆಗೆದುಕೊಂಡು ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪ್ರೈವೇಟ್ ಸೆಕ್ರೆಟರಿಗಳನ್ನು ಸೆಲೆಕ್ಟ್ ಮಾಡಿಕೊಳ್ಳುವುದನ್ನು ಆಯಾ ಮಂತ್ರಿಗಳ ಇಚ್ಛೆಯ ಪ್ರಕಾರ ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಬಿಡಬೇಕು. ಅವರಿಗೆ ಇಷ್ಟವಿಲ್ಲದೇ ಇರುವವರನ್ನು ನಾವು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಆದ್ದರಿಂದ ಮಂತ್ರಿಗಳಿಗೆ ಯಾರಲ್ಲಿ ಕಾನ್‌ಫಿಡೆನ್ಸ್ ಇರುತ್ತದೆಯೋ ಅಂಥವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳು ಬೇರೆ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡತಕ್ಕ ಸಂಪ್ರದಾಯ ಇಲ್ಲ. ತಾವು ಯಾವ ರಾಜ್ಯದಲ್ಲಿ ನೋಡಿದರೂ ಈಗ ನಮ್ಮಲ್ಲಿ ಯಾವ ಸಂಪ್ರದಾಯ ಇದೆಯೋ ಅದೇ ಸಂಪ್ರದಾಯ ಬೇರೆ ರಾಜ್ಯಗಳಲ್ಲಿಯೂ ಇದೆ. ಆದ್ದರಿಂದ ನಾವು ಫೋರ್ಸ್ ಮಾಡಿ ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಈಗ ಪ್ರತಿಯೊಬ್ಬ ಮಂತ್ರಿಗಳಿಗೂ ಅವರವರ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವರಿಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಇದೆಯೆಂದು ಹೇಳಿದಿರಿ, ಅವರನ್ನು ನೇಮಕ ಮಾಡಬೇಕಾದರೆ ಅವರಿಗೆ ಇರಬೇಕಾದ ರಿಕ್ವಿಜಿಟ್ ಕ್ವಾಲಿಫಿಕೇಷನ್ ಯಾವುದು ?

ಶ್ರೀ ವಾಟಾಳ್ ನಾಗರಾಜ್.—ಈಗ ಮಂತ್ರಿಮಂಡಲದಲ್ಲಿ 22 ಜನ ಮಂತ್ರಿಗಳಿದ್ದಾರೆ. ಅವರಿಗೆ ಒಬ್ಬೊಬ್ಬರು ಮಹಿಳಾ ಪ್ರೈವೇಟ್ ಸೆಕ್ರೆಟರಿಗಳನ್ನು ಏತಕ್ಕೆ ನೇಮಿಸಬಾರದು ? ಮತ್ತು ಈಗ ಈ ಮಂತ್ರಿಮಂಡಲದಲ್ಲಿರತಕ್ಕ ಮಹಿಳಾ ಮಂತ್ರಿಗಳೂ ಸಹ ಗಂಡನವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಂಡಿದ್ದಾರೆ, ಏತಕ್ಕೆ ?

ಶ್ರೀ ಡಿ. ದೇವರಾಜ ಅರಸ್.—ಅದು ಅವರಿಗೆ ಸೇರಿದ್ದು. ಮಂತ್ರಿಗಳು ಬೇಕಾದರೆ ಅವರ ಧರ್ಮಪತ್ನಿಯವರನ್ನು ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್.—ಮಂತ್ರಿಗಳ ಧರ್ಮಪತ್ನಿಗಳೂ ಮಂತ್ರಿಗಳೇ ನರಿ ಬಿಡಿ.

ಶ್ರೀ ಕೆ. ಶ್ರೀರಾಮುಲು.—ಜಾತ್ಯಾತೀತ ರಾಜ್ಯ ಎಂದು ಹೇಳುವಾಗ ಮಂತ್ರಿಗಳು ಅವರ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಳ್ಳವಾಗ ಅವರವರ ಜಾತಿಯವರನ್ನೇ ನೇಮಕ ಮಾಡಿಕೊಳ್ಳಬೇಕು ಎಂದರೆ ಅದು ಹೇಗಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಈಗಾಗಲೇ ಹೇಳಿದ್ದೇನೆ, ಈಗ ಇರತಕ್ಕ ಪದ್ಧತಿಯನ್ನು ಬದಲಾಯಿಸುವುದಕ್ಕಾಗುವುದಿಲ್ಲ. ಮತ್ತು ಹೊಸದಾಗಿ ಒಂದು ಪದ್ಧತಿಯನ್ನು ಅನುಸರಿಸುವುದಕ್ಕಾಗುವುದಿಲ್ಲ. ಎಲ್ಲಾ ರಾಜ್ಯಗಳಲ್ಲೂ ಮತ್ತು ಕೇಂದ್ರದಲ್ಲೂ ಈಗ ನಮ್ಮಲ್ಲಿರತಕ್ಕ ಪದ್ಧತಿಯೇ ಇದೆ.

Fair Price Shops in Bangalore

417. **Sri K. M. NAGANNA** (Chickpet).—

Will the Minister of State for Food and Civil Supplies be pleased to state:—

the action taken against Fair Price Shops in Bangalore City that had indulged in malpractices in the supply of rice and sugar ?

Smt. E. E. VAZ (Minister of State for Food and Civil Supplies).—Action as per the provisions of law has been taken.

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರಿನಲ್ಲಿ ಫೇರ್‌ಪ್ರೈಸ್ ಡಿಪೋದಲ್ಲಿ ಇತ್ತೀಚೆಗೆ 10 ಜನಗಳು ಇರತಕ್ಕಂಥಾ ಒಂದು ಸಂಸಾರಕ್ಕೆ 40 ಕೆಜಿ ಅಕ್ಕಿಯನ್ನು ಕೊಡುತ್ತಿದ್ದುದನ್ನು 12 ಕೆಜಿ ಗೆ ಇಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರಿಮತಿ ಇ. ಇ. ವಾಜ್.—6½ ವರ್ಷದ ಕೆಳಗಡೆ ಇರತಕ್ಕ ಮಕ್ಕಳಿಗೆ ಒಂದು ಯೂನಿಟ್‌ಗೆ 1 ಕೆ ಜಿ ಯಂತೆಯೂ 6½ ವರ್ಷಕ್ಕಿಂತ ಮೇಲ್ಪಟ್ಟು ಇರತಕ್ಕವರಿಗೆ 2 ಯೂನಿಟ್ ಎಂದರೆ 2 ಕೆ ಜಿ ಅಕ್ಕಿಯನ್ನೂ ಕೊಡರಾಗುತ್ತಿದೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳುವುದು ಏನೆಂದರೆ ಹಿಂದೆ ಬೆಂಗಳೂರು ಸಿಟಿಯಲ್ಲಿ 10 ಜನ ಇರುವ ಸಂಸಾರಕ್ಕೆ 40 ಕೆ ಜಿ ಅಕ್ಕಿಯನ್ನು ಕೊಡುತ್ತಿದ್ದರು. ಈಗ ಅದನ್ನು 12 ಕೆ ಜಿಗೆ ಇಳಿಸಿದ್ದಾರೆ. ಇದಕ್ಕೆ ತಮ್ಮ ಅನುಮತಿ ಕೊಟ್ಟಿದ್ದೀರಾ?

ಶ್ರಿಮತಿ ಇ. ಇ. ವಾಜ್.—ಕಾರ್ಪೋರೇಷನ್‌ನಲ್ಲಿ ಒಂದು ಪಾಲಸಿ ಮಾಡಿಕೊಂಡಿದ್ದೇವೆ. ಈಗ ಅಕ್ಕಿಯ ದಾಸ್ತಾನು ಕಡಿಮೆ ಇರುವುದರಿಂದ ಈಗಾಗಲೇ ನಾನು ಹೇಳಿದ ನಿಯಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರಿನಲ್ಲಿ ಎಷ್ಟು ನ್ಯಾಯಬೆಲೆಯ ಅಂಗಡಿಗಳು ಇವೆ. ಮತ್ತು ಬೆಂಗಳೂರು ನಗರಕ್ಕೆ ಎಷ್ಟು ಸಕ್ಕರೆ ಕೋಟಾವನ್ನು ಕೊಟ್ಟಿದ್ದೀರಿ. ಯಾವ ಯಾವ ಫೇರ್‌ಪ್ರೈಜ್ ಡಿಪೋಕ್ಕೆ ಎಷ್ಟೆಷ್ಟು ಸಕ್ಕರೆಯನ್ನು ಕೊಡಬೇಕೆಂದು ನಿಗದಿ ಮಾಡಿದ್ದೀರಿ?

ಶ್ರೀಮತಿ ಇ. ಇ. ವಾಜ್.—ಬೆಂಗಳೂರು ನಗರದಲ್ಲಿ ಇಂಡಿವಿಜುಯಲ್ ಫೇರ್‌ಪ್ರೈಸ್ ಡಿಪೋಗಳು ಮತ್ತು ಕೋ-ಆಪರೇಟಿವ್ ಸೊಸೈಟಿಗಳು ಎರ್ಲ್ಲಾ ಸೇರಿ 498 ಇವೆ. ಇವುಗಳಲ್ಲಿ 150 ಕೋ-ಆಪರೇಟೀವ್ ಸೊಸೈಟಿಗಳು. ಮಿಕ್ಕವು ಫೇರ್‌ಪ್ರೈಸ್ ಡಿಪೋಗಳು. ಇದರಲ್ಲಿ ಒಂದು ಯೂನಿಟ್ಟಿಗೆ ಒಂದು ಕೆ ಜಿ ಸಕ್ಕರೆಯನ್ನು ಕೊಡರಾಗುತ್ತಿದೆ. ಒಂದು ಕಾರ್ಡಿಗೆ ತಿಂಗಳಿಗೆ ಮ್ಯಾಗ್ಸಿಮಮ್ 10 ಕೆ ಜಿ ಸಕ್ಕರೆಯನ್ನು ಕೊಡಲಾಗುತ್ತದೆ. ಬೆಂಗಳೂರು ನಗರಕ್ಕೆ 1,733 ಟನ್ ಸಕ್ಕರೆ ಬೇಕಾಗುತ್ತದೆ. ಅದನ್ನು ಪೂರ್ತಿಕೊಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನಲ್ಲಿರತಕ್ಕ ನ್ಯಾಯ ಬೆಲೆಯ ಅಂಗಡಿಗಳಷ್ಟಕ್ಕೆ ಎಷ್ಟು ಅಂಗಡಿಗಳು ಸರಿಯಾಗಿ ನಡೆಯದೆ ದುರ್ವ್ಯವಹಾರ ನಡೆಸುತ್ತಿವೆ ಎಂದು ಕಂಪ್ಲೈಂಟ್ ಬಂದಿದೆ, ಕಳೆದ ಒಂದು ವರ್ಷದಲ್ಲಿ ಎಷ್ಟು ಜನಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀಮತಿ ಇ. ಇ. ವಾಜ್.—1971-72 ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ 43 ಕೇಸುಗಳನ್ನು ಡಿಟೆಕ್ಟ್ ಮಾಡರಾಯಿತು. 22 ಜನರದು ಲೈಸೆನ್ಸ್ ಕ್ಯಾನ್ಸಲ್ ಮಾಡರಾಯಿತು. 12 ಜನರು ಡಿಪಾಸಿಟ್ ಕಳೆದುಕೊಂಡಿದ್ದಾರೆ. 10 ಜನರಿಗೆ ವಾರ್ನಿಂಗ್ ಕೊಟ್ಟಿದೆ.

ಶ್ರೀ ಕೆ. ಎಂ. ನಾಗಣ್ಣ.—ಅಕ್ಕಿದಾಸ್ತಾನು ಕಡಿಮೆ ಇರುವುದರಿಂದ 40 ಕೆ.ಜಿ. ಇರುವ ಕಡೆ 12 ಕೆ ಜಿ ಕೊಡಲಾಗುತ್ತಿದೆ, ಎಂದು ಹೇಳಿದಿರಿ, ಅಕ್ಕಿಯ ದಾಸ್ತಾನು ಸರಿಯಾಗಿದ್ದರೆ 12 ಕೆ ಜಿ ಯಿಂದ 40 ಕೆ ಜಿ ಗೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.—ಅಕ್ಕಿ ಜಾಸ್ತಿ ದಾಸ್ತಾನು ಬಂದರೆ ರೇಷನ್‌ನ್ನು ಏರಿಸುತ್ತೇವೆ.

Selection of M.A.S. and Non-M.A.S. to I.A.S.

419. Sri K. R. SRINIVASULU NAYUDU (Shanthinagar).—

Will the Chief Minister be pleased to state :—

(a) whether Class-I (both M.A.S. and non-M.A.S.) Officers are eligible for promotion to I.A.S. Cadre ; if so, the basis adopted for selection ;